International Journal of Kannada Research
www.kannadajournal.com

**ISSN: 2454–5813**
IJSR 2016; 2(3): 07-10
© 2016 IJKS
www.kannadajournal.com
Received: 02-05-2016
Accepted: 03-06-2016

**ರವಿಶಂಕರ ಜಿ. ಕೆ.**
**ಸಂಶೋಧನ ವಿದ್ಯಾರ್ಥಿ ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನ ವಿಭಾಗ**
**ಸರಕಾರಿ ಕಾಲೇಜು, ಕಾಸರಗೋಡು**

**Correspondence**
**ರವಿಶಂಕರ ಜಿ. ಕೆ.**
**ಸಂಶೋಧನ ವಿದ್ಯಾರ್ಥಿ ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನ ವಿಭಾಗ**
**ಸರಕಾರಿ ಕಾಲೇಜು, ಕಾಸರಗೋಡು**

# ಪತ್ರಿಕೋದ್ಯಮ ಕ್ಷೇತ್ರ ಮತ್ತು ನಾಡೋಜ ಡಾ. ಕಯ್ಯಾರ ಕಿಞ್ಞಣ್ಣ ರೈ : ಒಂದು ಅವಲೋಕನ.

**ರವಿಶಂಕರ ಜಿ. ಕೆ.**

ಶತಾಯುಶಿಯಾಗಿ ಬಾಳಿದ ಕವಿ ನಾಡೋಜ ಡಾ. ಕಿಞ್ಞಣ್ಣ ರೈ ಅವರು ಭಾರತದ ಸ್ವಾತಂತ್ರ್ಯ ಹೋರಾಟಗಾರರಾಗಿ, ಅಪ್ಪಟ ಗಾಂಧೀವಾದಿಯಾಗಿ, ಕರ್ನಾಟಕ ಏಕೀಕರಣದ ಕಾರ್ಯಕರ್ತರಾಗಿ, ಗಡಿನಾಡಿನಲ್ಲಿ ಕನ್ನಡ ಹೋರಾಟದ ಮುಂದಾಳುವಾಗಿ, ರಾಷ್ಟ್ರಪ್ರಶಸ್ತಿ ಪಡೆದ ಶ್ರೇಷ್ಟ ಅಧ್ಯಾಪಕರಾಗಿ ಕಾಣಿಸಿಕೊಂಡವರು. ನವೋದಯದ ಮಹತ್ವದ ಕವಿಯಾಗಿ ಗುರುತಿಸಿಕೊಂಡ ಕಯ್ಯಾರರು ಗದ್ಯ ಸಾಹಿತ್ಯಕ್ಕಿಂತ ಪದ್ಯದ ಕಡೆಗೆ ಹೆಚ್ಚಿನ ಒಲವನ್ನು ಇಟ್ಟುಕೊಂಡಿದ್ದವರು. 'ಶ್ರೀಮುಖ', 'ಐಕ್ಯಗಾನ', 'ಪುನರ್ನವ', 'ಮಕ್ಕಳ ಪದ್ಯ ಮಂಜರಿ', 'ಚೇತನ', 'ಪಂಚಮಿ', 'ಕೊರಗ ಮತ್ತು ಇತರ ಕವನಗಳು', 'ಪ್ರತಿಭಾ ಪಯಸ್ವಿನೀ', 'ಗಂಧವತೀ', 'ಆಶನರ ಖಂಡಕಾವ್ಯಗಳು', 'ಎನ್ನಪ್ಪೆ ತುಳುವಪ್ಪೆ' ಮೊದಲಾದ ಕವನಸಂಕಲನಗಳ ಕರ್ತೃ. 'ರತ್ನರಾಶಿ', 'ಪರಶುರಾಮ', 'ಅನ್ನದೇವರು ಮತ್ತು ಇತರ ಕಥೆಗಳು' ಇವರ ಪ್ರಮುಖ ಗದ್ಯ ಕೃತಿಗಳಾದರೆ 'ಮಲಯಾಳ ಸಾಹಿತ್ಯ ಚರಿತ್ರೆ', 'ಸಾಹಿತ್ಯ ದೃಷ್ಠಿ', 'ಮಹಾಕವಿ ಗೋವಿಂದ ಪೈ' ಸಾಹಿತ್ಯ ವಿಮರ್ಶೆಗೆ ಸಂಬಂಧಿಸಿದ ಪ್ರಮುಖ ಕೃತಿಗಳು. 'ದುಡಿತವೇ ನನ್ನ ದೇವರು' ಇವರ ಆತ್ಮಕಥೆ. ಅಧ್ಯಾಪಕರಾಗಿ ದುಡಿಯುತ್ತಾ ಸಾಹಿತ್ಯ ಕೃಷಿಯ ಜೊತೆಗೆ ಕಾಸರಗೋಡಿನ ಕನ್ನಡ ಹೋರಾಟದಲ್ಲಿಯೂ ಮುಂಚೂಣಿಯಲ್ಲಿದ್ದ ಕಯ್ಯಾರರು 'ಐಕ್ಯವೊಂದೆ ಮಂತ್ರ, ಐಕ್ಯದಿಂದೆ ಸ್ವಾತಂತ್ರ್ಯ, ಐಕ್ಯಗಾನದಿ ರಾಷ್ಟ್ರ ತೇಲುತಿರಲಿ' ಎಂದು ಐಕ್ಯಮಂತ್ರವನ್ನು ಪಠಿಸಿದವರು. ಸಾಮಾನ್ಯ ಕೃಷಿ ಕುಟುಂಬದಲ್ಲಿ ಜನಿಸಿದ ಕಯ್ಯಾರರು ರಾಜ್ಯ-ರಾಷ್ಟ್ರವ್ಯಾಪಿ ಬೆಳೆದ ಯಶೋಗಾಥೆ, ಅವರ ಸಾಹಿತ್ಯ ಸೃಷ್ಟಿಗೆ ಲಭಿಸಿದ ಸ್ಫೂರ್ತಿ ಪ್ರೇರಣೆಗಳು ಅವರ ಆತ್ಮಕಥೆಯಲ್ಲಿ ವಿವರವಾಗಿ ದಾಖಲಾಗಿದೆ.

ಪತ್ರಿಕೋದ್ಯಮ ಕ್ಷೇತ್ರದಲ್ಲಿ ಲಭಿಸುವಂತಹ ಪ್ರಪಂಚಾನುಭವ ಬೇರೆಲ್ಲೂ ದೊರಕಲಾರದು. ಅದು ಅಪಾರ ನಿಷ್ಠೆ ಮತ್ತು ಕಾಯಕವನ್ನು ಬೇಡುವಂತಹ ವೃತ್ತಿ. ಭಾರತದಲ್ಲಿ ರಾಷ್ಟ್ರೀಯತೆಯನ್ನು ಬೆಳೆಸಿ ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಣೆ ನೀಡಿದುದರಲ್ಲಿ ಪತ್ರಿಕೆಗಳ ಪಾತ್ರ ಅತ್ಯಂತ ಹಿರಿದಾದುದು. ಕಯ್ಯಾರ ಕಿಞ್ಞಣ್ಣ ರೈಯವರ ಸ್ವಾತಂತ್ರ್ಯ ಹೋರಾಟ ಮತ್ತು ಪತ್ರಿಕೋದ್ಯಮಿಯಾಗಿ ಅವರ ದುಡಿತ ಇವೆರಡು ಜೊತೆ ಜೊತೆಯಾಗಿ ಸಾಗಿ ಬಂದಿದೆ. ಹಾಗಾಗಿ ಅವೆರಡನ್ನು ಪರಸ್ಪರ ಪ್ರತ್ಯೇಕಿಸಿ ನೋಡಬೇಕಾಗಿಲ್ಲ. ಕಯ್ಯಾರರ ಪತ್ರಿಕಾ ಸಾಹಿತ್ಯವನ್ನು ಅರಿಯಬೇಕಾದರೆ ಇರುವ ದೊಡ್ಡ ತೊಡಕೆಂದರೆ ಆ ಕಾಲದ ಪತ್ರಿಕೆಗಳ ಅಲಭ್ಯತೆ. ಹಾಗಾಗಿಯೇ ಕಯ್ಯಾರರ ಪತ್ರಿಕಾ ಸಾಹಿತ್ಯ ಹೆಚ್ಚು ವಿಶ್ಲೇಷಣೆಗಳಿಗೆ ಒಳಗಾಗಿಲ್ಲ. ಪ್ರಸ್ತುತ ಪ್ರಬಂಧಕ್ಕೆ ಸ್ವತಃ ಕಯ್ಯಾರರೇ ಸಂಗ್ರಹಿಸಿಟ್ಟಿದ್ದ, ಸದ್ಯ ಉಡುಪಿಯ ಮಣಿಪಾಲದಲ್ಲಿ ನೆಲೆಸಿರುವ ಅವರ ಅಳಿಯ ಭುವನಪ್ರಸಾದ ಹೆಗ್ಡೆಯವರು ಕಾಪಾಡಿಕೊಂಡು ಬರುತ್ತಿರುವ ಕೆಲವು ಪತ್ರಿಕೆಗಳನ್ನು ಆಧಾರವಾಗಿ ಗಮನಿಸಿಕೊಳ್ಳಲಾಗಿದೆ.

ಕಯ್ಯಾರರು ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದ ಸಂದರ್ಭದಲ್ಲಿ ಗಾಂಧೀಜಿ ಬ್ರಿಟೀಷರ ವಿರುದ್ದ ಉಪ್ಪಿನ ಸತ್ಯಾಗ್ರಹ ಚಳುವಳಿಯನ್ನು ಆರಂಭಿಸಿದ್ದರೆ ದಕ್ಷಿಣಕನ್ನಡದಲ್ಲಿ ಕಾರ್ನಾಡು ಸದಾಶಿವ ರಾಯರು ಅದರ ನೇತೃತ್ವ ವಹಿಸಿಕೊಂಡಿದ್ದರು. ಪತ್ರಿಕೆಯಲ್ಲಿನ ಸುದ್ದಿಯಿಂದ ಪ್ರೇರಿತರಾಗಿ ಸ್ವಾತಂತ್ರ್ಯ ಚಳುವಳಿಯ ಕಡೆಗೆ ಆಕರ್ಷಿತರಾದ ಕಯ್ಯಾರರು ಚಳುವಳಿಯಲ್ಲಿ ಭಾಗಿಯಾಗಿದ್ದರು. ಕಯ್ಯಾರರಲ್ಲಿ ದೇಶಭಕ್ತಿ ಮತ್ತು ಸಾಹಿತ್ಯ ಅಭಿರುಚಿಯನ್ನು ಬಿತ್ತಿದ್ದ ಪತ್ರಿಕಾ ಮಾಧ್ಯಮ ಮುಂದೆ ಕಯ್ಯಾರರಿಗೆ ಭಾಷಿಕ, ಸಾಹಿತ್ಯಿಕ, ಸಾಂಸ್ಕೃತಿಕ ಹೋರಾಟಗಳಿಗೆ ಅದು ವೇದಿಕೆಯಾಯಿತು. ಮಂಗಳೂರಿನಿಂದ ಬರುತ್ತಿದ್ದ 'ಪ್ರಭಾತ' ಮತ್ತು 'ಸ್ವದೇಶಾಭಿಮಾನಿ' ಪತ್ರಿಕೆಗಳಲ್ಲಿ ಉಪಸಂಪಾದಕರಾಗಿ ದುಡಿದ ಕಯ್ಯಾರರು ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿ ನೀಡುವ ಕಾರ್ಯವನ್ನು ಪತ್ರಿಕೆಗಳಲ್ಲಿ ಲೇಖನ ವ್ಯವಸಾಯದ ಜೊತೆಗೆ, ರಾಷ್ಟ್ರೀಯತೆಯನ್ನು ಪ್ರತಿಪಾದಿಸುವ ಕವನಗಳ ಮೂಲಕ ನಡೆಸಿದರು.

ಪತ್ರಿಕೆಗಳೊಂದಿಗೆ ಕಯ್ಯಾರ ಕಿಞ್ಞಣ್ಣ ರೈಯವರ ಒಡನಾಟ ಅವರ ಪ್ರಾಥಮಿಕ ಶಾಲಾ ವಿದ್ಯಾಭ್ಯಾಸದಿಂದ ಆರಂಭವಾಗಿ ಅವರ ಕೊನೆಯ ದಿನಗಳವರೆಗೂ ಕೂಡ ನಿರಂತರವಾಗಿತ್ತು. ಆದರೆ ಅವರು ವೃತ್ತಿನಿರತ ಪತ್ರಿಕೋದ್ಯಮಿಯಾಗಿ 1935 ರಿಂದ 1944 ರವರೆಗೆ ಸುಮಾರು 9 ವರ್ಷಗಳ ಕಾಲ ದುಡಿದಿದ್ದಾರೆ. ಕಯ್ಯಾರರು ಪತ್ರಿಕೋದ್ಯಮವನ್ನು ಆರಂಭಿಸಿದ್ದು ಪ್ರಭಾತ ದಿನಪತ್ರಿಕೆಯ ಮೂಲಕ. ಕಯ್ಯಾರರು ಮನಸ್ಸು ಮಾಡಿದ್ದರೆ ಆಗ ತಾನೆ ಸಂಸ್ಕೃತ ಮತ್ತು ಕನ್ನಡದಲ್ಲಿ ವಿದ್ವತ್ ಪದವಿ ಪಡೆದಿದ್ದ ಅವರಿಗೆ ಯಾವುದೇ ವಿಶ್ವವಿದ್ಯಾಲಯದಲ್ಲಿ ಉದ್ಯೋಗ ದೊರೆಯುವುದು ಕಷ್ಟವಾಗುತ್ತಿರಲಿಲ್ಲ. ಆದರೆ ಸ್ವಾತಂತ್ರ್ಯ ಚಳುವಳಿಯ ಹುಚ್ಚು ಹತ್ತಿಸಿಕೊಂಡಿದ್ದ ಕಯ್ಯಾರರಿಗೆ ಪತ್ರಿಕೋದ್ಯಮ, ಹೋರಾಟಕ್ಕೆ ಒಂದು ಅಸ್ತ್ರವಾಗಿ ಕಂಡಿತು.

ಆರಂಭದಲ್ಲಿ ಕಯ್ಯಾರರು ಕುಡ್ಪಿ ವಾಸುದೇವ ಶೆಣೈಯವರು ಮಂಗಳೂರಿನಲ್ಲಿ ಆರಂಭಿಸಿದ್ದ ಪ್ರಭಾತ ಪತ್ರಿಕೆಯಲ್ಲಿ ಉಪಸಂಪಾದಕರಾಗಿ ಸೇರಿಕೊಂಡರು. ಕಾಸರಗೋಡು ತಾಲೂಕು ಮಲಬಾರ್ ಪ್ರಾಂತ್ಯಕ್ಕೆ ಸೇರಬೇಕೆಂಬ ಮಲಯಾಳಿಗಳ ಕೂಗು ಸಣ್ಣಮಟ್ಟಿಗೆ ಆರಂಭವಾಗಿದ್ದ ಸಂದರ್ಭವದು. ಕಯ್ಯಾರರು 1938ರ ಡಿಸೆಂಬರ್‌ನಲ್ಲಿ ಪ್ರಭಾತ ಪತ್ರಿಕೆಯಲ್ಲಿ ಮೊದಲ ಪುಟದಲ್ಲಿ 'ಕಾಸರಗೋಡು ಗಡಿನಾಡಲ್ಲಿ ಮಲೆಯಾಳಿಗಳ ಧಾಳಿ' ಎಂಬ ಶೀರ್ಷಿಕೆಯಲ್ಲಿ ಸರಣಿ ರೂಪದಲ್ಲಿ ಅಂಕಣವನ್ನು 'ಕನ್ನಡಿಗ' ಎಂಬ ಹೆಸರಿನಲ್ಲಿ ಬರೆಯಲಾರಂಭಿಸಿದರು. ಮಲೆಯಾಳಿಗಳು ಕನ್ನಡ ಪ್ರದೇಶಕ್ಕೆ ಬರಲಾರಂಭಿಸಿದ ಹಿನ್ನಲೆಯಿಂದ ಆರಂಭಿಸಿ, ಸಮಸ್ಯೆಯ ಪರಿಹಾರದ ದಾರಿಗಳನ್ನು ಕಂಡುಕೊಳ್ಳುವುದು ಅವರ ಈ ಲೇಖನಗಳ ಮುಖ್ಯ ಉದ್ದೇಶವಾಗಿತ್ತು. ಭಾಷಾವಾರು ಪ್ರಾಂತ್ಯಗಳ ರಚನೆಯಲ್ಲಿ ಆಗಿರುವ ಅವೈಜ್ಞಾನಿಕತೆಯನ್ನು ತೆರೆದಿಡುವ ಈ ಲೇಖನ ಸರಣಿ ಕಾಸರಗೋಡು ಪ್ರದೇಶಕ್ಕೆ ಆಗಿರುವ ಅನ್ಯಾಯದ ಬಗ್ಗೆ ಅಧ್ಯಯನ ಮಾಡುವವರಿಗೂ ಅತ್ಯಂತ ಉಪಯುಕ್ತವಾದುದು. ಹಾಗಾಗಿ ಈ ಲೇಖನಗಳಿಗೆ ಚಾರಿತ್ರಿಕ ಮಹತ್ವವೂ ಇದೆ.

ಡಿಸೆಂಬರ್ 23, 1938ರ ದೈನಿಕದಲ್ಲಿ 'ಕಾಸರಗೋಡು ಭವಿಷ್ಯವನ್ನು ನಿರ್ಮಿಸುವುದು ತುಳುಜನರ ಕೈಯಲ್ಲಿದೆ' ಎಂಬ ಉಪಶೀರ್ಷಿಕೆಯಲ್ಲಿನ ಲೇಖನ ಕಾಸರಗೋಡಿನ ಈಗಿನ ಸಂದರ್ಭಕ್ಕೂ ಪ್ರಸ್ತುತವೆನಿಸಬಹುದಾದಂತಹ, ಬಹಳ ಮುಖ್ಯವಾದ ಲೇಖನ. ಈ ಲೇಖನದಲ್ಲಿ ಅವರು ಕಾಸರಗೋಡು ತಾಲೂಕಿನಲ್ಲಿ ತುಳು ಭಾಷಿಕರು ಮಲಯಾಳಿ ಭಾಷಿಕರಿಗಿಂತ ಅಧಿಕವಾಗಿರುವುದನ್ನು ಆಧಾರ ಸಹಿತ ನಿರೂಪಿಸುತ್ತಾ ತುಳುವರು ಕನ್ನಡಕ್ಕಾಗಿ ಹೋರಾಡಬೇಕಾಗಿರುವ ಅನಿವಾರ್ಯತೆಯನ್ನು ಸಾರಿದ್ದರು.(ಪ್ರಭಾತ, 23–12–1938).

ಡಿಸೆಂಬರ್ 26, 1938ರ ದೈನಿಕದಲ್ಲಿ 'ಕನ್ನಡಿಗರಲ್ಲವೆನಲು ಎದೆಗಾರಿಕೆಯುಂಟೆ?' ಲೇಖನದಲ್ಲಿ ತುಳುವರು ಕನ್ನಡವನ್ನು ರಾಜಭಾಷೆಯಾಗಿ ಅಂಗಿಕರಿಸಿರುವ ಹಾಗೆ ಈ ಪ್ರದೇಶದ ಮಲೆಯಾಳಿಗಳೂ ಕನ್ನಡವನ್ನು ಅಂಗೀಕರಿಸಿಕೊಳ್ಳಬೇಕಾದ ಅನಿವಾರ್ಯತೆಯನ್ನು ಪ್ರತಿಪಾದಿಸಿದ್ದಾರೆ. 'ಸಾವಿರ ಸಾವಿರ ವರ್ಷಗಳಿಂದ ತಮ್ಮ ಹಿರಿಯರ ಪರಂಪರೆಯಿಂದಲೂ ಕನ್ನಡ ನಾಡು, ಕನ್ನಡದ ನುಡಿಗಳೇ ತಮಗೆ ಸವಿಯನ್ನು ಒದಗಿಸಿರಲು ಇಂದು ಅದನ್ನು ಅಲ್ಲಗಳೆಯುವುದು, ಅದಕ್ಕೆ ಮೆಟ್ಟಿ ನಿಲ್ಲುವುದು ದ್ರೋಹಾತ್ಮಕವಾದುದು' ಎಂಬುದಾಗಿ ಸಾರಿದ್ದಾರೆ. ಮುಂದುವರಿದು, 'ನಾಡಿಗೆ ಭಾಷೆ ಒಂದೇ ಆಗಿರಬೇಕು. ಅದು ಭಿನ್ನವಾಗಿರಲು ಸಾಧ್ಯವಿಲ್ಲ. ಪ್ರಜಾಪ್ರಭುತ್ವದಲ್ಲಿಯೂ ಅನಾಯಕತ್ವ ಸಲ್ಲದು' ಎಂಬುದಾಗಿ ಪ್ರತಿಪಾದಿಸುತ್ತಾರೆ. (ಪ್ರಭಾತ, 26–12–1938)

ಪ್ರಭಾತ ಪತ್ರಿಕೆಯಲ್ಲಿನ ಅನುಭವವನ್ನು ಕಯ್ಯಾರರು ಹೀಗೆ ದಾಖಲಿಸುತ್ತಾರೆ: "ಆ ಕಾಲದ ಪತ್ರಿಕೋದ್ಯಮವೆಂದರೆ ದಿನರಾತ್ರಿಯ ಜೀವನ ಸಂಗ್ರಾಮ. ಬೇರೆ ಬೇರೆ ಕಡೆಗಳಿಂದ ವಿಷಯ ಸಂಗ್ರಹಿಸಿ ಬರೆಯಬೇಕು. ರಾಜಕೀಯ, ಸಾಮಾಜಿಕ, ಸಾಹಿತ್ಯಿಕ ಎಲ್ಲ. ಅದರ ಜತೆಗೆ ಸಿನಿಮಾ ಪ್ರಪಂಚವೂ. ಪ್ರೆಸ್ಸಿನಿಂದ ಬಂದಂತೆ ಪ್ರೂಫ್ ತಿದ್ದಿಯೂ ಕೊಡಬೇಕು. ನಗರದ ಸಭೆಗಳಿಗೆ ಹೋಗಿ ವರದಿ ಮಾಡಬೇಕು. ಸರಕಾರಿ ಕಚೇರಿಗಳನ್ನು ಸಂದರ್ಶಿಸಿ ವಿಷಯ ತಿಳಿಯಬೇಕು. ಈ ಎಲ್ಲಾ ಪತ್ರಿಕೋದ್ಯಮದ ಪ್ರಾಥಮಿಕ ಅಭ್ಯಾಸ ಅಲ್ಲಿಯೇ ಮಾಡಿದೆ. ಅದು ನನ್ನ ಮುಂದಿನ ಪತ್ರಿಕೋದ್ಯಮದ ಯಶಸ್ಸಿಗೆ ಕಾರಣವಾಯಿತೆಂದು ಸಮಾಧಾನ ಪಟ್ಟಿದ್ದೇನೆ." (ದುಡಿತವೇ ದೇವರು, 1997, ಪುಟ–80)

ಮುಂದೆ ಪ್ರಭಾತ ಪತ್ರಿಕೆಯನ್ನು ಬಿಟ್ಟು ಕಯ್ಯಾರರು ಸ್ವದೇಶಾಭಿಮಾನಿ ವಾರಪತ್ರಿಕೆಯಲ್ಲಿ ಉಪಸಂಪಾದಕರಾದರು. ವಿ.ಎಸ್. ಕಾಮತ್‌ರಿಂದ ಮಂಗಳೂರಿನಲ್ಲಿ ಆರಂಭಗೊಂಡಿದ್ದ ಈ ಪತ್ರಿಕೆಯಲ್ಲಿ ಗೋವಿಂದ ಪೈ, ಶಿವರಾಮ ಕಾರಂತ, ಎಮ್.ಎನ್ ಕಾಮತ್, 'ಬಡವರ ಬಂಧು' ಪತ್ರಿಕೆ ಆರಂಭಿಸಿದ ಮಂಗಳೂರು ಜಾರಪ್ಪ ಮೊದಲಾದವರು ಲೇಖನಗಳನ್ನು ಬರೆಯುತ್ತಿದ್ದರು. ಶಾರದ ಛಾಪಖಾನೆಯಿಂದ ಪ್ರಕಟವಾಗುತ್ತಿದ್ದ ಈ ಪತ್ರಿಕೆ ಕಥೆ ಕವನಗಳಿಗೂ ಅವಕಾಶ ಕಲ್ಪಿಸಿತ್ತು. ಹಾಗಾಗಿ ಸಾಹಿತ್ಯದಲ್ಲಿ ಆಸಕ್ತರಾಗಿದ್ದ ತರುಣ ಕಯ್ಯಾರರು ಉಪಸಂಪಾದಕರಾಗಿ ಸೇರ್ಪಡೆಯಾದರು.

ಈ ಪತ್ರಿಕೆಯಲ್ಲಿ ಕಯ್ಯಾರರು ಬೇರೆ ಬೇರೆ ಹೆಸರುಗಳಿಂದ ಅಂಕಣವನ್ನು, ಲೇಖನವನ್ನು ಬರೆಯುತ್ತಿದ್ದರು. ದುರ್ಗಾದಾಸ, ಕೆ. ಆರ್., ಕೆ. ಕೆ. ರೈ, ಕಯ್ಯಾರ, ಕನ್ನಡಿಗ, ಮುಂತಾದ ಹೆಸರುಗಳಲ್ಲಿ ಅವರು ಬೇರೆ ಬೇರೆ ಲೇಖನಗಳನ್ನು ಬರೆದಿದ್ದಾರೆ. ಇದಲ್ಲದೆ ಪ್ರತಿಭಾ ಶಕ್ತಿಗೆ ಪ್ರೋತ್ಸಾಹ ನೀಡುತ್ತಿದ್ದ ಕಯ್ಯಾರರು ಅನೇಕ ವಿದ್ಯಾರ್ಥಿಗಳ, ಸಹಪಾಠಿಗಳ, ಒಡನಾಡಿಗಳ ಲೇಖನಗಳು ಪತ್ರಿಕೆಯಲ್ಲಿ ಪ್ರಕಟವಾಗುವಂತೆ ನೋಡಿಕೊಂಡರು. ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಣೆ, ಪ್ರೋತ್ಸಾಹ ನೀಡುವುದರೊಂದಿಗೆ ಸಾಹಿತ್ಯಕ್ಕೂ ಕೂಡ ಸ್ಥಾನವನ್ನು ಕಯ್ಯಾರರು ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಕಲ್ಪಿಸಿಕೊಟ್ಟರು. ಪ್ರತೀ ವಾರ ಪುಸ್ತಕ ವಿಮರ್ಶೆಯನ್ನು ಸ್ವತಃ ತಾವೇ ಮಾಡುತ್ತಿದ್ದುದಲ್ಲದೆ ಅಗಾಗ ಕಥೆಗಳನ್ನು ಬರೆಯುತ್ತಿದ್ದರು. 'ದುರ್ಗಾದಾಸ' ಎಂಬ ಹೆಸರಿನಲ್ಲಿ ಕಥೆಗಳನ್ನು ಮತ್ತು 'ಕಯ್ಯಾರ' ಎಂಬ ಹೆಸರಿನಲ್ಲಿ ಪಾಂಡಿತ್ಯದ ಪ್ರದರ್ಶನವಿಲ್ಲದೆ ಬಹಳ ಸರಳವಾದ ಭಾಷೆಯಲ್ಲಿ ಪುಸ್ತಕ ವಿಮರ್ಶೆ ಮಾಡುತ್ತಿದ್ದರಿಂದ ಅದು ಜನಸಾಮಾನ್ಯರಿಗೂ ತಲುಪುವುದಕ್ಕೆ ಸಾಧ್ಯವಾಯಿತು. ಕಥೆಗೆ ಪೂರಕವಾಗಿರುವಂತಿದ್ದ ಒಂದು ಚಿತ್ರವನ್ನೂ ಪ್ರಕಟಿಸುತ್ತಿದ್ದರು. ಸಾಮಾನ್ಯವಾಗಿ ಅದು ಆ ಕಾಲದ ಚಲನಚಿತ್ರದಿಂದ ಆಯ್ದ ಚಿತ್ರವಾಗಿದ್ದು ಕಲಾವಿದರ ಹೆಸರೂ ಕೂಡ ಪ್ರಕಟವಾಗುತ್ತಿತ್ತು. ಅವರ 'ಅನ್ನದೇವರು ಮತ್ತು ಇತರ ಕಥೆಗಳು' ಕಥಾಸಂಕಲನ ಸ್ವದೇಶಾಭಿಮಾನಿ ಪತ್ರಿಕೆಗೆ ಬರೆದಿದ್ದ ಕಥೆಗಳ ಸಂಕಲನ.

'ಜೀವಜ್ಯೋತಿಗಳು' ಎನ್ನುವುದು ಕಯ್ಯಾರರು ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಬರೆಯುತ್ತಿದ್ದ ಅಂಕಣ. ಇದರಲ್ಲಿ ಪ್ರತಿಬಾರಿ ಸ್ವಾತಂತ್ರ್ಯ ಹೋರಾಟಗಾರರ, ಮಹಾನ್ ವ್ಯಕ್ತಿಗಳ ಜೀವನ–ಸಾಧನೆಯನ್ನು ಸಂಕ್ಷಿಪ್ತವಾಗಿ ಒಂದು ಪುಟದ ಮಿತಿಯಲ್ಲಿ ಬರೆಯುತ್ತಿದ್ದರು. ಈ ಲೇಖನಗಳಲ್ಲಿ ಅವರು ತಮ್ಮ ಸಂಪೂರ್ಣ ಹೆಸರನ್ನು ಬಳಸಿಕೊಳ್ಳುತ್ತಿದ್ದುದು ವಿಶೇಷ. ಕಯ್ಯಾರರು ಗಾಂಧೀಜಿಯ ಪರಮ ಭಕ್ತರಾಗಿದ್ದರೂ ಕ್ರಾಂತಿಕಾರಿ ನಾಯಕರನ್ನೂ ಕೂಡ ಈ ಅಂಕಣದಲ್ಲಿ ಪರಿಚಯಿಸಿದ್ದರು. ಈ ಅಂಕಣದಲ್ಲಿ ಅವರ ಗದ್ಯದ ಶೈಲಿ ಕಾವ್ಯಮಯವಾದ ವಾಕ್ಯಗಳಿಂದ ತುಂಬಿರುತ್ತಿದ್ದುದು ಮಾತ್ರವಲ್ಲದೆ ಅಲ್ಲಲ್ಲಿ ಉಪಶೀರ್ಷಿಕೆಗಳನ್ನು ನೀಡಿ ಒಂದು ಪುಟದ ಮಿತಿಯಲ್ಲಿ ಆಕರ್ಷಕವಾಗಿ ಕಾಣಿಸುವಂತೆ ಮಾಡುತ್ತಿದ್ದರು.

ಕಯ್ಯಾರರು 1941 ಜನವರಿ ತಿಂಗಳ ಕೊನೆಯ ಸ್ವದೇಶಾಭಿಮಾನಿ ಸಂಚಿಕೆಯಲ್ಲಿ ಕೆ.ಆರ್. ಎಂಬ ಹೆಸರಿನಲ್ಲಿ 'ದಕ್ಷಿಣ ಕನ್ನಡದ ವಿದ್ಯಾಸಂಸ್ಥೆಗಳಲ್ಲಿ ಶಿಕ್ಷಣ ಮಾಧ್ಯಮವಾಗಿ ಕನ್ನಡ' ಎಂಬ ಲೇಖನವನ್ನು ಬರೆದಿದ್ದಾರೆ. ಭಾರತೀಯರಲ್ಲಿ ರಾಷ್ಟ್ರೀಯ ಭಾವನೆ ಜಾಗೃತಗೊಂಡು ದೇಶೀಯ ಭಾಷೆಯಲ್ಲಿ ಶಿಕ್ಷಣ ದೊರೆಯುವಂತಾಗಬೇಕೆಂಬ ಎಂಬ ವಾದ ಭಾರತೀಯರಿಂದ ಆರಂಭವಾಗಿದ್ದ ಸಂದರ್ಭವದು. ಮಿಶನರಿಗಳು ಭಾರತೀಯರ ವಾದವನ್ನು ತಿರಸ್ಕರಿಸುತ್ತಿರುವುದನ್ನು ಖಂಡಿಸಿ ಈ ಲೇಖನವನ್ನು ಬರೆದಿದ್ದಾರೆ. ಇದರಲ್ಲಿ "ಶಿಕ್ಷಣ ಮಾಧ್ಯಮವಾಗಿ ದೇಶಭಾಷೆಯನ್ನು ಅಂಗೀಕರಿಸುವುದರಿಂದ ಆಂಗ್ಲಭಾಷಾ ಜ್ಞಾನವು ಕೆಟ್ಟು ಹೋಗುವುದೆಂದು ತಿಳಿಯುವುದು ಸರಿಯಲ್ಲ. ನಾವು ಗಣಿತ, ವಿಜ್ಞಾನ ಮೊದಲಾದ ವಿಷಯಗಳನ್ನು ಕನ್ನಡದಲ್ಲಿ ವಿದ್ಯಾರ್ಥಿಗಳಿಗೆ ಕಲಿಸಿದರೆ ವಿಷಯಗಳು ಆದಷ್ಟು ಬೇಗನೆ ಅವರ ಮನಸ್ಸಿಗೆ ಮುಟ್ಟುವುದರಿಂದ ಅಂತಾರಾಷ್ಟ್ರೀಯ ಪ್ರಖ್ಯಾತಿಯುಳ್ಳ ಆಂಗ್ಲಭಾಷೆಯ ವಿಫುಲ

ಸಾಹಿತ್ಯಾರ್ಜನೆಗೆ ಅವರಿಗೆ ಅವಕಾಶ ಹೆಚ್ಚು ದೊರೆತಂತಾಗಿ ಆಂಗ್ಲಭಾಷಾ ಜ್ಞಾನವೂ ಇದರಿಂದ ಹೆಚ್ಚಲು ಅವಕಾಶವಿದೆ. ಇದರೊಂದಿಗೆ ನಾವೀಗ ತುಚ್ಛವೆಂದು ಪರಭಾವಿಸುವ ದೇಶಭಾಷಾ ಜ್ಞಾನವೂ ಹೆಚ್ಚುವುರಲ್ಲಿ ಏನೇನೂ ಸಂಶಯವಿಲ್ಲ'' ಎನ್ನುತ್ತಾರೆ. (ಸ್ವದೇಶಾಭಿಮಾನಿ, 30–01–1941)

1941ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೀಕರ ಜಲಪ್ರಳಯವಾಗಿತ್ತು. ಕಯ್ಯಾರರು ಜಿಲ್ಲೆಯಾದ್ಯಂತ ಸಂಚರಿಸಿ ನೆರೆಹಾವಳಿಯ ಸಂಕಷ್ಟವನ್ನು ವಿವರವಾಗಿ ವರದಿ ಮಾಡಿದರು. ಆ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟ ತೀವ್ರವಾಗಿದ್ದರೂ ಅದನ್ನು ಬದಿಗಿರಿಸಿ ಸದ್ಯದ ಪರಿಸ್ಥಿತಿಯೆಡೆಗೆ ಗಮನಹರಿಸಿದರು. ಅವರ ಪತ್ರಿಕಾ ವರದಿಗಳು ರಾಷ್ಟ್ರಮಟ್ಟದಲ್ಲಿ ಸುದ್ದಿಯಾಯಿತು. ಮದ್ರಾಸ್‌ನಿಂದ ಬರುತ್ತಿದ್ದ ಇಂಗ್ಲೀಷ್ ಪತ್ರಿಕೆಗಳಲ್ಲಿಯೂ ಅದು ಮುಖ್ಯವಾದ ಸುದ್ದಿಯಾಗಿ ಪ್ರಕಟವಾಯಿತು. ಇದರಿಂದ ಎಚ್ಚೆತ್ತ ಅಂದಿನ ಸರಕಾರ ಮತ್ತು ಕಾಂಗ್ರೆಸ್ ಕಾರ್ಯಕರ್ತರು ಪರಿಹಾರ ಕಾರ್ಯಗಳನ್ನು ತೀವ್ರಗೊಳಿಸಿದರು. ಜಲಪ್ರಳಯದ ಕುರಿತಾಗಿ ಸ್ವದೇಶಾಭಿಮಾನಿ ಪತ್ರಿಕೆಯ ಮೊದಲ ಎರಡು ಪುಟಗಳಲ್ಲಿ ಕಯ್ಯಾರರು ಲೇಖನವನ್ನು ಬರೆದಿದ್ದಾರೆ. 'ಜಿಲ್ಲೆಯ ನೆರೆ ಹಾವಳಿಯ ಕೆಲವು ವಿವರಗಳು, ಲಕ್ಷಾಂತರ ರೂಪಾಯಿ ನಷ್ಟ! ಮನೆಮಾರುಗಳು ಹೋಗಿವೆ! ಜನಜಾನುವಾರುಗಳ ಪ್ರಾಣಹಾನಿಯೂ ಒದಗಿದೆ! ಅನಾಥರಾದ ಜನರಿಗೆ ಸಹಾಯವಿತ್ತು ಸಂರಕ್ಷಿಸಿರಿ' ಶೀರ್ಷಿಕೆಯನ್ನು 4–5 ವಾಕ್ಯಗಳಿಗೆ ವಿಸ್ತರಿಸಿದ್ದನ್ನು ನೋಡಿದರೆ ಕಯ್ಯಾರರಿಗೆ ಈ ವಿಷಯವನ್ನು ಗಂಭೀರವಾಗಿ ಎಲ್ಲರಿಗೂ ತಲುಪಿಸಬೇಕೆಂಬ ಕಾಳಜಿ ಯಾವ ಮಟ್ಟಿಗಿತ್ತು ಎಂಬುದು ಅರ್ಥವಾಗುತ್ತದೆ. (ಸ್ವದೇಶಾಭಿಮಾನಿ, 20–06–1941)

1941 ಜುಲೈ ತಿಂಗಳ 13ರ ಪ್ರಭಾತ ದೈನಿಕದಲ್ಲಿ 'ನೆರೆಯಲ್ಲಿ ನಿರಾಶ್ರಿತರಾದವರಿಗೆ ಸಹಾಯ – ಕಾಂಗ್ರೆಸ್ ಕೆಲಸಗಾರರ ಜನತಾಸೇವೆ' ಎಂಬ ಶೀರ್ಷಿಕೆಯಲ್ಲಿ ಶ್ರೀ ಕೆ. ಕೆ. ರೈಯವರು ಹೀಗೆ ತಿಳಿಸಿರುವರು ಎಂದು ಲೇಖನ ಪ್ರಕಟವಾಗಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಆಗ ಕಯ್ಯಾರರು ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಉಪಸಂಪಾದಕರಾಗಿದ್ದರು. ಹಾಗಾಗಿ ಅದು ಕಯ್ಯಾರರ ನೇರ ಲೇಖನ ಎಂಬರ್ಥದಲ್ಲಿ ಪ್ರಕಟವಾಗಿಲ್ಲ. 1941ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂದ ಪ್ರವಾಹಕ್ಕೆ ಕೈಗೊಂಡಿರುವ ಪರಿಹಾರ ಕಾರ್ಯಗಳ ಬಗೆಗಿನ ವರದಿಯ ರೂಪದಲ್ಲಿದ್ದು ಬಹುಶಃ ಇದು ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಪ್ರಕಟವಾದ ಲೇಖನದ ಸಂಗ್ರಹರೂಪ ಇರಬಹುದು. (ಪ್ರಭಾತ, 13–07–1941)

ಅವರು 1943ರಲ್ಲಿ ದಕ್ಷಿಣಕನ್ನಡ ಜಿಲ್ಲೆಯ ಪತ್ರಕರ್ತರ ಸಂಘಟನೆಯ ಕಾರ್ಯದರ್ಶಿಯಾಗಿ, ಅದೇ ವರ್ಷ ಮಂಗಳೂರಿನಲ್ಲಿ ನಡೆದ ಅಖಿಲ ಕರ್ನಾಟಕ ಪತ್ರಕರ್ತರ ಸಮ್ಮೇಳನದ ಮಹಾಕಾರ್ಯದರ್ಶಿಯೂ ಆಗಿ ದುಡಿದಿದ್ದರು.

ಪತ್ರಿಕೋದ್ಯಮ ಕಯ್ಯಾರರಿಗೆ ರಾಜಕೀಯ ಅನುಭವಗಳನ್ನು ನೀಡಿತು. ಮಂಗಳೂರು ಅವರ ಎಲ್ಲ ಚಟುವಟಿಕೆಗಳ ಕೇಂದ್ರವೂ ಆಗಿತ್ತು. ಅವರು ಪತ್ರಿಕೆಯಲ್ಲಿ ದುಡಿಯುತ್ತಿದ್ದ ಸಂದರ್ಭದಲ್ಲಿಯೇ ಕ್ವಿಟ್ ಇಂಡಿಯಾ ಚಳುವಳಿ ತೀವ್ರ ಸ್ವರೂಪವನ್ನು ಪಡೆದುಕೊಂಡಿತ್ತು. ಎಲ್ಲಿ ನೋಡಿದರೂ ಲಾಠಿಪ್ರಹಾರ, ಗುಂಡಿನ ಸುರಿಮಳೆ, ಹೊಡೆದಾಟ–ಬಡಿದಾಟಗಳು. ಕಯ್ಯಾರರಿಗೆ ಹೋರಾಟದ ಗುಪ್ತ ಚಟುವಟಿಕೆಗಳಲ್ಲಿ ಭಾಗವಹಿಸುವ ಆದೇಶವಿದ್ದರಿಂದ ಅವರು ಹಳ್ಳಿ ಹಳ್ಳಿಯ ಕಾರ್ಯಕರ್ತರಿಗೆ ಸಂದೇಶ ರವಾನಿಸುವ ಕೆಲಸ ಮಾಡಿದರು. ಪತ್ರಿಕೆಯ ಕೆಲಸ ಮುಗಿಸಿ 40 –50 ಮೈಲಿ ಸೈಕಲ್ ತುಳಿದು, ಇಲ್ಲವೆ ನಡೆದೇ ಹೋಗಿ ಸಂದೇಶ ಮುಟ್ಟಿಸುವುದು, ಜನರಿಗೆ ಸ್ವಾತಂತ್ರ್ಯ ಹೋರಾಟದ ಮಾಹಿತಿಯನ್ನು ನೀಡುವುದು, ಅಂಕಿ–ಸಂಖ್ಯೆಗಳ ಮಾಹಿತಿ ನೀಡುವುದು, ಹೋರಾಟ ನಿಲ್ಲದಂತೆ ನೋಡಿಕೊಳ್ಳುವುದು ಮುಂತಾದ ಜವಾಬ್ದಾರಿಗಳನ್ನು ಅವರು ಸಮರ್ಥವಾಗಿ ನಿರ್ವಹಿಸಿದರು. ಮೂಡಬಿದಿರೆಯ ಸೇತುವೆಯನ್ನು ಕ್ರಾಂತಿಕಾರಿಗಳು ಮುರಿದದ್ದನ್ನು ವರದಿ ಮಾಡುವಂತಿಲ್ಲ ಎಂಬ ಆದೇಶ ಸೆನ್ಸಾರ್ ಮಂಡಲಿಯಿಂದ ಬಂದಿದ್ದರೂ ಕಯ್ಯಾರರು ಅದನ್ನು ವರದಿ ಮಾಡಿದ್ದರು. ಮುಂದೆ ಮಂಗಳೂರು ಕೋರ್ಟ್ ಪಿಕೆಟಿಂಗ್ ಚಳುವಳಿಯಲ್ಲಿ ಭಾಗವಹಿಸಿದವರನ್ನೆಲ್ಲ ಬ್ರಿಟೀಷ್ ಸರಕಾರ ಬಂಧಿಸಿತು. ಹಾಗೆ ಬಂಧನಕ್ಕೊಳಗಾದವರಲ್ಲಿ ಕಯ್ಯಾರರು ಒಬ್ಬರು. ಆದರೆ ಅವರು ಪತ್ರಿಕಾ ವರದಿಗಾರ ಎಂದು ಹೇಳಿ ಸೆರೆವಾಸದ ಶಿಕ್ಷೆಯಿಂದ ತಪ್ಪಿಸಿಕೊಂಡರು. ಕಯ್ಯಾರರಿಗೆ ಉಳಿದ ಹೋರಾಟದ ಬಂಧುಗಳ ಜೊತೆಗೆ ಸೆರೆವಾಸ ಅನುಭವಿಸುವ ಆಸೆಯಿದ್ದರೂ ಮೇಲಿನಿಂದ ಗುಪ್ತಚಟುವಟಿಕೆಯಲ್ಲಿ ಭಾಗಿಯಾಗುವ ಆದೇಶವಿದ್ದರಿಂದ ಅವರು ಹೋರಾಟಕ್ಕೆ ಅನಿವಾರ್ಯರಾಗಿದ್ದರು.

ಕನ್ನಡದ ಖ್ಯಾತ ಲೇಖಕರಾದ ನಿರಂಜನರು ಒಮ್ಮೆ ಪತ್ರಕರ್ತರಾಗಬೇಕೆಂಬ ಆಸಕ್ತಿಯಿಂದ ಕಯ್ಯಾರರನ್ನು ಭೇಟಿಯಾದಾಗ ಅವರಿಗೆ 'ಪತ್ರಿಕೋದ್ಯಮ ಪ್ರಯೋಜನಕಾರಿಯಾದುದಲ್ಲ, ಯಾವುದಾದರು ಶಾಲೆಯಲ್ಲಿ ಶಿಕ್ಷಕನಾಗುವುದೇ ಲೇಸು' ಎಂಬ ಸಲಹೆ ನೀಡಿದ್ದರು. ಬಹುತೇಕ ಕಯ್ಯಾರರು ಶಿಕ್ಷಕ ವೃತ್ತಿಯಲ್ಲಿನ ಗೌರವ, ಆದರ್ಶಗಳಿಗೆ ಮನಸೋತು ಈ ಮಾತು ಅಂದಿರಬೇಕೇ ಹೊರತು ಪತ್ರಿಕೋದ್ಯಮ ಬೇಸರ ತರಿಸಿದುದರಿಂದಾಗಿ ಹೇಳಿರುವ ಸಾಧ್ಯತೆಗಳು ಕಡಿಮೆ. ಆತ್ಮಕಥೆಯಲ್ಲಿ ಅವರೇ ಹೇಳುವಂತೆ 1944ರಲ್ಲಿ ಕಾಸರಗೋಡಿನ ಪೆರಡಾಲದಲ್ಲಿ ನವಜೀವನ ಹೈಸ್ಕೂಲ್ ಆರಂಭಗೊಳ್ಳುವುದಕ್ಕೆ ಅವರು ಸರ್ವಪ್ರಯತ್ನಗಳನ್ನು ನಡೆಸಿದ್ದರೂ ಅವರಿಗೆ ಅದರಲ್ಲಿ ಶಿಕ್ಷಕರಾಗುವ ಆಸಕ್ತಿಯಿರಲಿಲ್ಲ. ಸ್ವಾತಂತ್ರ್ಯ ಹೋರಾಟ ಮತ್ತು ಪತ್ರಿಕೋದ್ಯಮವನ್ನು ಎಷ್ಟು ಮಾತ್ರಕ್ಕೂ ಬಿಟ್ಟುಬಿಡುವ ಮನಸ್ಸಿಲ್ಲದಿದ್ದರೂ, ಅವರು ಅನಿವಾರ್ಯವಾಗಿ ಅವರಿಗೆ ಮೊದಲ ಅಕ್ಷರ 'ಶ್ರೀ ಗಣಾಧಿಪತಯೇ ನಮಃ' ಬರೆಯಿಸಿ ಅಕ್ಷರಾರಂಭಿಸಿದ್ದ ಗುರುಗಳಾದ ಪಂಜಿರ್ಕೆ ಅನಂತಭಟ್ಟರ ಒತ್ತಾಯದ ಮೇರೆಗೆ ಪತ್ತಿಕೋದ್ಯಮ ಬಿಟ್ಟು ಅಧ್ಯಾಪಕರಾದರು.

ಕಯ್ಯಾರರು 'ಸ್ವದೇಶಾಭಿಮಾನಿ' ಪತ್ರಿಕೆಯನ್ನು ಬಿಡುವುದು ಶಾರದಾ ಪ್ರೆಸ್ಸ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಕಯ್ಯಾರರ ಡಾಕ್ಟರರೂ ಆಗಿದ್ದ ಡಾ. ವಿ ಪಿ. ಕಾಮತ್‌ರಿಗೆ ಇಷ್ಟವಿರಲಿಲ್ಲ. ಆದರೆ ಅವರು ಕಯ್ಯಾರರ ಆರೋಗ್ಯದ ದೃಷ್ಟಿಯಿಂದ ಹಳ್ಳಿಗೆ ಹೋಗುವುದು ಉತ್ತಮವೆಂದೂ, ಮುಂದೆಂದಾದರೂ ಹಳ್ಳಿಯ ವಾತಾವರಣ ಹಿಡಿಸದಿದ್ದ ಪಕ್ಷದಲ್ಲಿ ಪುನಃ ಪತ್ರಿಕೆ ಸೇರಿಕೊಳ್ಳಬಹುದೆಂಬ ಮುಕ್ತ ಅವಕಾಶವನ್ನು ಮುಂದಿಟ್ಟಿದ್ದರು. ಪತ್ರಕರ್ತ ಹುದ್ದೆಯನ್ನು ಬಿಟ್ಟ ಮೇಲೂ ಪತ್ರಿಕೋದ್ಯಮ ಮತ್ತು ಪತ್ರಿಕಾ ಮಿತ್ರರ ಒಡನಾಟಗಳಗಳನ್ನು ಕಯ್ಯಾರರು ಬಿಡಲಿಲ್ಲ. ಮುಂದೆ ಅವರ ಹೆಚ್ಚಿನ ಪುಸ್ತಕಗಳೆಲ್ಲವೂ ಶಾರದಾ ಪ್ರೆಸ್ಸಿನಲ್ಲೇ ಮುದ್ರಿತವಾಗಿರುವದನ್ನು ಈ ಹಿನ್ನಲೆಯಲ್ಲಿ ಗಮನಿಸಬೇಕು.

ಕಯ್ಯಾರು ಪತ್ರಿಕೋದ್ಯಮಿಯಾಗಿ ದುಡಿದದ್ದು ಸ್ವಾತಂತ್ರ್ಯ ಪೂರ್ವದಲ್ಲಿ. ಆ ಸಂದರ್ಭದ ಸರಕಾರ ಮತ್ತು ಸಾರ್ವಜನಿಕರ ನಡುವಿನ ಸಂಪರ್ಕ ಸೇತುವೆಯಾಗಿ ಅವರು ದುಡಿದರು. ಪತ್ರಿಕೋದ್ಯಮದಲ್ಲಿ ತಮ್ಮ ಅನುಭವವನ್ನು ವಿವರಿಸುವಾಗ ಕಯ್ಯಾರರು ಹೀಗೆ ಹೇಳುತ್ತಾರೆ:

''ಮಂಗಳೂರಿನ ಆ ಕಾಲದ ಪತ್ರಿಕೋದ್ಯಮದಿಂದ ನನಗೆ ನಾಡಿನ ರಾಜಕೀಯ, ಸಾಮಾಜಿಕ, ಸಾಹಿತ್ಯಿಕ ವಿವಿಧ ಕಾರ್ಯಕಲಾಪಗಳ ಹೆಚ್ಚಿನ ಅನುಭವಾಯಿತು. ಜಿಲ್ಲೆಯ ಹಾಗು ಕರ್ನಾಟಕದ ಹಲವಾರು ಧೀಮಂತ ಧುರೀಣರ, ಕಾರ್ಯಕರ್ತರ ಪರಿಚಯದ ಭಾಗ್ಯ ದೊರೆಯಿತು. ಮಂಗಳೂರಿನಲ್ಲಿ ನಾನೂ, ಕುಳಕುಂದ ಶಿವರಾಯ, ಪಿ.ಕೆ ನಾರಾಯಣ, ಬಿ.ವಿ ಬಾಳಿಗ, ಮೊದಲಾದವರು ಸೇರಿ ಜಿಲ್ಲಾ ಪತ್ರಿಕೋದ್ಯಮ ಸಂಘ, ಪ್ರಕಾಶ್ ಎಸೋಸಿಯೇಷನ್, ಚಲನಚಿತ್ರ ವಿಮರ್ಶಕರ ಸಂಘ, ಪ್ರಗತಿಶೀಲ ಸಾಹಿತ್ಯ ಸಂಘ ಇತ್ಯಾದಿ ಸಂಘಸಂಸ್ಥೆಗಳನ್ನು ಸ್ಥಾಪಿಸಿ ದುಡಿದೆವು. ವಾರಕ್ಕೊಮ್ಮೆ ಈ ಬೇರೆ ಬೇರೆ ಸಂಘಸಂಸ್ಥೆಗಳ ಆಶ್ರಯದಲ್ಲಿ ವಿಚಾರ ಸಂಕಿರಣ, ಚರ್ಚಾಗೋಷ್ಠಿ, ಕವಿಸಮ್ಮೇಳನ ಮೊದಲಾದವುಗಳನ್ನು ಜರುಗಿಸಿದೆವು. ಮರಳಿ ಮಣ್ಣಿಗೆ, ಕಾನೂರು ಹೆಗ್ಗಡತಿ, ಇಂತಹ ಕಾದಂಬರಿಗಳ ಮೇಲೆ ವಿಚಾರ ಸಂಕಿರಣ ಏರ್ಪಡಿಸಿದೆವು. ನ್ಯೂ ಥಿಯೇಟರ್ಸ್, ಪ್ರಭಾತ ಚಲನಚಿತ್ರಗಳನ್ನು ವಿಮರ್ಶಿಸಿದೆವು. ಮಕ್ಕಳ ಸಮ್ಮೇಳನ ಜರುಗಿಸಿದೆವು. ಅ.ನ.ಕೃ, ತ.ರಾ.ಸು. ಕಾರಂತ, ಎನ್ಕೆ ಇಂತಹವರನ್ನು ಆಹ್ವಾನಿಸಿ ಭಾಷಣಗಳನ್ನು ಏರ್ಪಡಿಸಿದೆವು. ಬೆಂಗಳೂರಿನಲ್ಲಿ ಜರುಗಿದ ಕರ್ನಾಟಕ ಪತ್ರಿಕೋದ್ಯಮ ಸಮ್ಮೇಳನಕ್ಕೆ ನಾನು ದಕ್ಷಿಣಕನ್ನಡದ ಪ್ರತಿನಿಧಿಯಾಗಿ ಹೋಗಿ ಪಾಲ್ಗೊಂಡೆನು.'' (ಕಯ್ಯಾರ ಕಿಞ್ಞಣ್ಣ ರೈ, 1997 ಪುಟ–28)

ಒಟ್ಟು ಪತ್ರಿಕೋದ್ಯಮದೊಂದಿಗಿನ ಕಯ್ಯಾರರ ಒಡನಾಟವನ್ನು ಗಮನಿಸಿದಾಗ, ಕಯ್ಯಾರರನ್ನು ಸ್ವಾತಂತ್ರ್ಯ ಹೋರಾಟಗಾರರಾಗಿ, ಗಡಿನಾಡಿನ ಕನ್ನಡಪರ

ಹೋರಾಟಗಾರರಾಗಿ, ಬಹುದೊಡ್ಡ ಸಾಹಿತಿಯಾಗಿ, ಆದರ್ಶ ಅಧ್ಯಾಪಕರಾಗಿ, ಕೃಷಿಕರಾಗಿ ಮುಂತಾಗಿ ಯಾವೆಲ್ಲ ಕ್ಷೇತ್ರದಲ್ಲಿ ಸಾಧಕರಾಗಿ ಗುರುತಿಸಲಾಗುತ್ತಿದೆಯೋ ಅದೆಲ್ಲದಕ್ಕೂ ಮೂಲ ತಳಪಾಯವನ್ನು ಒದಗಿಸಿಕೊಟ್ಟದ್ದು ಪತ್ರಿಕೋದ್ಯಮದೊಂದಿಗಿನ ಅವರ ಅನುಭವ ಎಂಬುದು ಅರಿವಾಗುತ್ತದೆ. ಯಾಕೆಂದರೆ ಅವರು ವೃತ್ತಿನಿರತ ಪತ್ರಕರ್ತರಾಗಿ ದುಡಿದದ್ದು ತಮ್ಮ 20 ರಿಂದ 29ನೆ ವಯಸ್ಸಿನವರೆಗಿನ ಏರು ಯೌವ್ವನದಲ್ಲಿ. ಆ ಕಾಲಘಟ್ಟ ಜೀವನದ ಒಟ್ಟು ದಾರಿಯನ್ನು ರೂಪಿಸುವಂತಹ ಕಾಲಘಟ್ಟವಾದ್ದರಿಂದ ಕಯ್ಯಾರರಿಗೆ ಜೀವನದ ಆದರ್ಶಗಳನ್ನು, ಮೌಲ್ಯಗಳನ್ನು ರೂಪಿಸಿಕೊಳ್ಳುವುದಕ್ಕೆ ಪತ್ರಿಕೋದ್ಯಮದಿಂದ ಪಡೆದುಕೊಂಡ ಜೀವನಾನುಭವಗಳು ಸಹಾಯಕವಾಯಿತು ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ.

**ಆಧಾರ ಗ್ರಂಥಗಳು**


1. 1.ಮುರಳೀಧರ ಉಪಾಧ್ಯ ಹಿರಿಯಡಕ. 'ಕಯ್ಯಾರ ಕಿಞ್ಞಣ್ಣ ರೈ ಒಂದು ಪ್ರಸ್ತಾವನೆ'.ಕಯ್ಯಾರ 75 ಅಭಿನಂದನ ಸಮಿತಿ ಮಣಿಪಾಲ (1989)
2. ವೈ.ಎಸ್.ವಿ. ಭಟ್ (ಪ್ರ.ಸಂ.). 'ಗಡಿನಾಡಿನ ಕಿಡಿ'. ಲಲಿತಕಲಾಸದನ ಕಾಸರಗೋಡು. (1990)
3. ಕಯ್ಯಾರ ಕಿಞ್ಞಣ್ಣ ರೈ. 'ದುಡಿತವೇ ದೇವರು'. ಕವಿತಾ ಕುಟೀರ.ಪೆರಡಾಲ. (1997)
4. ಪ್ರೇಮಾಭಟ್. 'ಹಿರಿಯ ಚೇತನ ಕಯ್ಯಾರ ಕಿಞ್ಞಣ್ಣ ರೈ'. ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು. (1997)
5. ಬಿ.ಎ.ವಿವೇಕ ರೈ (ಪ್ರ.ಸಂ).'ಪೊನ್ನಕಂಠಿ' ಅಖಿಲ ಭಾರತ 66ನೆ ಕನ್ನಡ ಸಾಹಿತ್ಯ ಸಮ್ಮೇಳನ.ಮಂಗಳೂರು. (1997)
6. ಪ್ರವೀಣ ಪದ್ಯಾಣ. 'ಕಾಸರಗೋಡಿನಲ್ಲಿ ಕನ್ನಡ ಪತ್ರಿಕೋದ್ಯಮ'. ಅಖಿಲ ಭಾರತ 74ನೆ ಕನ್ನಡ ಸಾಹಿತ್ಯ ಸಮ್ಮೇಳನ. ಉಡುಪಿ.(2007)
7. ನರೇಂದ್ರ ರೈ ದೇರ್ಲ. 'ಐಕ್ಯಗಾನದ ನಾಡೋಜ ಕಯ್ಯಾರ ಕಿಞ್ಞಣ್ಣ ರೈ'. ಕಾಂತವರ ಕನ್ನಡ ಸಂಘ.(2012)
8. ಭುವನ ಪ್ರಸಾದ ಹೆಗ್ಡೆ. 'ಕಯ್ಯಾರ ಶತಪೂರ್ತಿ ಸಂಭ್ರಮ'. ಪಾವನ ಪ್ರಕಾಶನ. ಮಣಿಪಾಲ. (2015)


**ಪತ್ರಿಕೆಗಳು:**


1. ಪ್ರಭಾತ ದಿನಪತ್ರಿಕೆ ಕೆಲವು ಸಂಚಿಕೆಗಳು.
2. ಸ್ವದೇಶಾಭಿಮಾನಿ ವಾರಪತ್ರಿಕೆ ಕೆಲವು ಸಂಚಿಕೆಗಳು.